

ಚಿತ್ರ: ಎಸ್.ಕೆ. ದಿನೇಶ್





## ಆಭರಣ ಫ್ಯಾಷನ್

ಪರಂಪರೆಯ ಆಭರಣ ಮತ್ತೆ ಫ್ಯಾಷನ್ ಆಗಿದೆ. ಸಾಂಪ್ರದಾಯಿಕ ಒಡವೆಗಳು ಆಧುನಿಕ ಸ್ಪರ್ಶದೊಂದಿಗೆ ಮತ್ತೆ ಫ್ಯಾಷನ್ ಜಗತ್ತಿಗೆ ಎಡತಾಕಿವೆ. ಚಿನ್ನದ ಮೇಲೆ ರೋಸ್‌ಕಟ್ ಡೈಮಂಡ್ ಮತ್ತು ರೂಬಿ ಅಳವಡಿಸಿ ಮಾಡಿದ ಆಭರಣ ಸಾಂಪ್ರದಾಯಿಕ ಲುಕ್ ಆದರೂ ಆಧುನಿಕ ಶೈಲಿಯ ಉಡುಗೆಗಳಿಗೆ ಚೆನ್ನಾಗಿ ಒಪ್ಪುತ್ತದೆ.

ಹೆಚ್ಚು ಜನಪ್ರಿಯಗೊಳ್ಳಲು ಕಾರಣ. ಮದುವೆ ಸಂದರ್ಭಗಳಲ್ಲೂ ಬಟ್ಟೆ, ಬಣ್ಣ, ಸ್ಟೈಲ್, ಗ್ಲಾಮರ್ ಮುಂತಾದವುಗಳ ಲೆಕ್ಕಾಚಾರದಿಂದ ಸೀರೆ ಕೊಳ್ಳುವ ಮಹಿಳೆಯರು ಹೆಚ್ಚು ಒತ್ತು ಕೊಡುವುದು ಫ್ಯಾಷನ್‌ಗೇ.

### ಕೆಲವು ಟಿಪ್ಸ್

- ರೇಷ್ಮೆ ಉಡುಪು ಧರಿಸುವಾಗ ದೇಹಕ್ಕೆ ಫಿಟ್ ಆಗುವಂಥ ಡ್ರೆಸ್ ಅನ್ನೇ ತೊಟ್ಟುಕೊಳ್ಳಿ.
- ಇತರ ಫ್ಯಾಬ್ರಿಕ್‌ನಿಂದ ತಯಾರಿಸಿದ ಉಡುಗೆಗಳೂ ದೇಹಕ್ಕೆ, ತ್ವಚೆಗೆ ಹಿತವಾಗುವಂತಿರಲಿ.
- ಚಮ್ಕಿ, ಮಣಿ, ಕಲರ್ ಬೀಡ್ಸ್ ಇರುವ ಉಡುಪು ಗ್ರ್ಯಾಂಡ್ ಲುಕ್ ಕೊಡುತ್ತದೆ. ಆದರೆ ಇದರ ನಿರ್ವಹಣೆ ಕಷ್ಟ.

### ಹಬ್ಬಕ್ಕೆ ಮಳಿಗೆಗಳ ತಯಾರಿ

ಯುಗಾದಿ ಹಬ್ಬಕ್ಕಾಗಿ ಥರಾವರಿ ಸೀರೆ, ಉಡುಪು, ಪುರುಷರ ಧೋತಿ, ಶರ್ಟ್‌ಗಳು ಬಂದಿದ್ದು ಮಾರಾಟಕ್ಕೆ ಪೈಪೋಟಿ ನಡೆಸುತ್ತಿವೆ. ಯುಗಾದಿ ಹಿನ್ನೆಲೆಯಲ್ಲಿ ರಿಯಾಯಿತಿ ಮಾರಾಟದ ಭರಾಟೆಯೂ ಜೋರಾಗಿದೆ. ಬೆಂಗಳೂರಿನ ಜನಪ್ರಿಯ ಸೀರೆ ಮಳಿಗೆಗಳಾದ ವಿಜಯಲಕ್ಷ್ಮಿ, ಸುದರ್ಶನ್, ದೀಪಂ, ಶಾಂತಲಾ, ಕಳಾಮಂದಿರ್, ಕಲಾನಿಕೇತನ್ ಮುಂತಾದವುಗಳಲ್ಲಿ ಈಗಾಗಲೇ ಶೇ.40ರಷ್ಟು ರಿಯಾಯಿತಿ ಘೋಷಿಸಿ ಗ್ರಾಹಕರನ್ನು ಸೆಳೆಯುತ್ತಿವೆ. ಇದರ ಜೊತೆಗೆ ‘ಒಂದು ಖರೀದಿಸಿದರೆ ಇನ್ನೊಂದು ಉಚಿತ’ ಎಂಬ ತಂತ್ರವೂ ಗ್ರಾಹಕರನ್ನು ಆಕರ್ಷಿಸುತ್ತಿದೆ. ಈ ಉಚಿತ, ಖಚಿತ ಕೊಡುಗೆಗಳಿಗೆ ಮಹಿಳೆಯರು ಮರುಳಾಗಿ ಸೀರೆಗಳತ್ತ ಇನ್ನೂ ಹೆಚ್ಚಿನ ಒಲವು ತೋರಿಸಬಹುದು ಎಂಬುದು ವರ್ತಕರ ಲೆಕ್ಕಾಚಾರ.

### ವಧುವಿನ ವಸ್ತ್ರ ವೈವಿಧ್ಯ

ಬೇಸಿಗೆ, ಅದರಲ್ಲೂ ಯುಗಾದಿ ಹಬ್ಬದ ಆಸುಪಾಸು ಎಂದರೆ ಅದು ಮದುವೆ ಮುಹೂರ್ತಗಳಿಗೆ ಸಕಾಲ. ಹೀಗಾಗಿ ವಧುವಿನ ಸೀರೆ ಕೂಡ ಬಹಳ ಫ್ಯಾಷನಬಲ್ ಆಗಿಯೇ ಇರಬೇಕು. ‘ಬ್ರೈಡಲ್ ವೇರ್’ ವಧುವಿನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವಂತಿರಬೇಕು. ಸೀರೆ, ಸಲ್ವಾರ್‌ಗಳಲ್ಲಿ ಸೀಕ್ವೆನ್ಸ್ ಕಲರ್‌ನ ಉಡುಪು, ರೇಷ್ಮೆ ಸೀರೆಯಲ್ಲಿ ಬುಟ್ಟಾ ಡಿಸೈನ್, ಕಲರ್ ಕಾಂಬಿನೇಷನ್ ಇಂದಿನ ಟ್ರೆಂಡ್‌ಗೆ ತಕ್ಕಂತಿದ್ದರೆ ವಧು ಇನ್ನೂ ಹೆಚ್ಚು ಸುಂದರವಾಗಿ ಕಾಣಲು ಸಾಧ್ಯವಾಗುತ್ತದೆ. ■